

بسم الله الرّحمٰن الرّحيم

# ಹೊಸ ಆಕಾಶ ಮತ್ತು ಹೊಸ ಭೂಮಿಯನ್ನು ನಿರ್ಮಿಸುವುದರಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹಾಯ ಮಾಡುವವರಾಗಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಜರ್ಮನಿಯ **ಫ್ರಾಂಕ್‌ಫಾರ್ಟ್**ನಿಂದ 05-06-2015 ರಂದು ನೀಡಿದ **ಜುಮುಅ ಖುತ್ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದು ಜರ್ಮನಿಯ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿರುವ ಬಹುತೇಕ ದೇಶಗಳಲ್ಲಿ ಇಂತಹ ಜಲ್ಸ ಜರಗಿಸುವುದು ಅಹ್ಮದಿಯಾ ಜಮಾಅತಿನ ಕಾರ್ಯಕ್ರಮಗಳ ಒಂದು ಪ್ರಮುಖ ಭಾಗವಾಗಿದೆ. ಒಂದು ಕಾಲಘಟ್ಟದಲ್ಲಿ ಹಿಂದೂಸ್ಥಾನದಲ್ಲಿರುವ ಅಹ್ಮದಿಯರಿಗೆ ಸಹ ಖಾದಿಯಾನಿನ ಜಲ್ಸದಲ್ಲಿ ಭಾಗವಹಿಸಲು ಖರ್ಚುವೆಚ್ಚಗಳ ಕಾರಣದಿಂದ ಬಹಳ ಕಷ್ಟವಾಗುತ್ತಿತ್ತು. ಕೆಲವರಿಗೆ ಅದು ಅಸಾಧ್ಯವೇ ಆಗಿತ್ತು. ಈ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಮಾಅತಿನ ಜನರೊಂದಿಗೆ ಹೇಳುತ್ತಿದ್ದರು: ವರ್ಷವಿಡೀ ಈ ಉದ್ದೇಶಕ್ಕೋಸ್ಕರ ಸ್ವಲ್ಪ ಸ್ವಲ್ಪ ಹಣವನ್ನು ಜಮಾಯಿಸುತ್ತಾ ಇರಬೇಕು. ಜಲ್ಸಕ್ಕೆ ಬರುವ ಖರ್ಚು ಮಾಡಲು ಆಗ ಸುಲಭವಾಗುವುದು ಎಂದು ಹೇಳಿದ್ದರು. ಆದರೆ ಇಂದಿನ ಸ್ಥಿತಿ ನೋಡಿರಿ, ಅಲ್ಲಾಹನ ಅನುಗ್ರಹದಿಂದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮತ್ತು ಜಮಾಅತ್‌ಗಳು ವರ್ಧಿಸಿರುವ ದೇಶಗಳಲ್ಲಿ ಜಲ್ಸಕ್ಕೆ ಬರುವವರು ತಮ್ಮ ಸ್ವಂತ ವಾಹನಗಳಲ್ಲಿ ಆಗಮಿಸುತ್ತಾರೆ. ಆ ವಾಹನಗಳ ಸಂಖ್ಯೆ ಎಷ್ಟು ಹೆಚ್ಚಾಗಿರುತ್ತವೆ ಎಂದರೆ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡುವುದಕ್ಕೆ ವಿಶಿಷ್ಟ ಏರ್ಪಾಡು ಮಾಡಬೇಕಾಗುತ್ತದೆ. ನಿಮ್ಮ ಪೈಕಿ ಹಲವರ ಹಿರಿಯರು ಜಲ್ಸಕ್ಕೆ ಹೋಗಲು ಬಹಳ ಕಷ್ಟಪಟ್ಟಿರಬಹುದು. ಪ್ರತಿವರ್ಷ ಜಲ್ಸಕ್ಕೆ ಹೋಗಬೇಕೆಂದು ಇಚ್ಛಿಸುತ್ತಿದ್ದರೂ ಅವರಿಗೆ ಅದು ಸಾಧ್ಯವಾಗುತ್ತಿರಲಿಲ್ಲ. ಆದರೆ ನಿಮ್ಮ ಪೈಕಿ ಯಾರಾದರೂ ಯೋಚಿಸಿರುವರೇ, ಇಷ್ಟೆಲ್ಲಾ ಸೌಲಭ್ಯಗಳು ದೊರಕಿದ ನಂತರ, ಸುಖ ಸಮೃದ್ಧಿ ಗಳಿಸಿದ ನಂತರ, ನಿಮಗೆ ಪ್ರಯಾಣ ಮಾಡಲು ಅನುಕೂಲತೆಗಳು ಲಭಿಸಿದ ನಂತರ ನೀವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ನಿಮ್ಮ ವಿಶ್ವಾಸ ವರ್ಧಿಸುವಂತೆ ಆಗಿದೆಯೇ ಎಂದು. ನಮ್ಮ ಹಿರಿಯರ ವಿಶ್ವಾಸದ ಮಟ್ಟ ಮತ್ತು ಅವರಿಗೆ ಅಲ್ಲಾಹನೊಂದಿಗಿದ್ದ ಸಾಮೀಪ್ಯದ ಮಟ್ಟಗಳಿಗೆ ನಾವು ತಲಪಿದ್ದೇವೆಯೇ? ಆ ಹಿರಿಯರಲ್ಲಿ ಕೆಲವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಜೀವಿಸಿದವರಾಗಿದ್ದರೂ ಅವರನ್ನು ನಂಬಿದವರಾಗಿದ್ದರೂ ಅವರಿಗೆ ಆಶೆಯಿದ್ದರೂ ಆರ್ಥಿಕ ತಡೆಗಳ ಕಾರಣದಿಂದ ಪ್ರಯಾಣ ಮಾಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ತಲಪಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗ, ಯಾವುದಾದರೂ ದೇಶದ ಒಂದು ಜಲ್ಸದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗುಲಾಮನಾದ ಒಬ್ಬ ಖಲೀಫ ಭಾಗವಹಿಸುವಾಗ ಆ ಜಲ್ಸದಲ್ಲಿ ಭಾಗವಹಿಸಲು ಬೇರೆ ದೇಶಗಳಿಂದಲೂ ಖರ್ಚು ಮಾಡಿ ಜನರು ಆಗಮಿಸುತ್ತಾರೆ. ನನ್ನ ಮುಂದೆ ಈಗ ಅಂತಹ ಅನೇಕ ಜನರು ಕುಳಿತಿದ್ದಾರೆ. ಅದೂ ಅಲ್ಲದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ತಿಳಿಯಲು, ಇಷ್ಟರವರೆಗೆ ಅಹ್ಮದಿಯರಾಗದ ಜನರು ಸಹ ಆಗಮಿಸಿದ್ದಾರೆ. ಅಲ್ಲಾಹನು ಪರಿಸ್ಥಿತಿಗಳನ್ನು ಬದಲಾಯಿಸುತ್ತಾ ಇದ್ದಾನೆಂಬುದು ಸಂತೋಷಕರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ಲೋಕದಲ್ಲಿ ಬಹಳ ವೇಗವಾಗಿ ಹಬ್ಬುತ್ತಾ ಇದೆ. ಅದರೊಂದಿಗೆ ನಾನು ಪ್ರಸ್ತಾಪಿಸಿದ ಆ ಹಿರಿಯರ ಸಂತತಿಗಳು ತಮ್ಮನ್ನು ಸ್ವತಃ ಪರಿಶೀಲಿಸಬೇಕಾಗಿದೆ. "ನಾವು ಅಲ್ಲಾಹನೊಂದಿಗಿರುವ ಸಾಮೀಪ್ಯ, ವಿಶ್ವಾಸ ಮತ್ತು ಅಲ್ಲಾಹನ ಆಜ್ಞೆಗಳ ಪಾಲನೆಯ ದೃಷ್ಟಿಯಲ್ಲಿ ಎಲ್ಲಿಗೆ ತಲಪಿದ್ದೇವೆ" ಎಂದು. ನಮ್ಮ ಕುಟುಂಬಗಳಲ್ಲಿ ನಮ್ಮ ಹಿರಿಯರ ಒಳಿತುಗಳಿಗೆ ಹೋಲಿಸಿ ನೋಡಿದರೆ, ನಾವು ವೇಗವಾಗಿ ಹಿಂದಕ್ಕೆ ಸರಿಯುತ್ತಾ ಇದ್ದೇವೆ ಎಂದಾದರೆ, ನಮ್ಮ ಸ್ಥಿತಿ ಚಿಂತಾಜನಕವಾಗಿದೆ. ನಾವು ಲೌಕಿಕ ಲಾಭಗಳಿಸುತ್ತಿದ್ದೇವೆ. ಆದರೆ ಧರ್ಮಕ್ಕೆ ಸಂಬಂಧಿಸಿ ನಾವು ಬರಿದಾದ ಸ್ಥಿತಿಯಲ್ಲಿದ್ದೇವೆ ಎಂದು ತಿಳಿದುಕೊಳ್ಳಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ಲೌಕಿಕ ಕೆಲಸಗಳಲ್ಲಿ ಮುಳುಗಿ ಕ್ರಮೇಣ ಅಲ್ಲಾಹನೊಂದಿಗೆ ಸಂಬಂಧವನ್ನು ವಿಚ್ಛೇಧಿಸುತ್ತಾನೆ. ಅಂತಹ ವ್ಯಕ್ತಿ ಅಲ್ಲಾಹನ ದೃಷ್ಟಿಯಿಂದ ತಿರಸ್ಕೃತನಾಗಿ ಶೈತಾನನ ಜೋಳಿಗೆಗೆ ಬೀಳುತ್ತಾನೆ. ಇಂತಹ ಜನರಿಗೆ ಜಲ್ಸಕ್ಕೆ ಆಗಮಿಸುವುದು ಕೇವಲ ಒಂದು ಆಚಾರವಾಗುತ್ತದೆ.

ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನೂ ಪ್ರಯತ್ನ ಮಾಡಬೇಕು, ನಾವು ಜಲ್ಸದಲ್ಲಿ ಭಾಗವಹಿಸುವುದು ನಮ್ಮ ಬಲಹೀನತೆಗಳನ್ನು ಗುರುತಿಸಿ ನಮ್ಮೊಳಗೆ ಸಂಪೂರ್ಣ ಕ್ರಾಂತಿ ಉಂಟುಮಾಡುವಂತಹ ಸನ್ನಿವೇಶ ನಿರ್ಮಾಣವಾಗಬೇಕು. ನಮ್ಮನ್ನು ಅಲ್ಲಾಹನಿಗೆ ಕೃತಜ್ಞ ಅರ್ಪಿಸುವವರನ್ನಾಗಿ ಮಾಡುವಂತಾಗಬೇಕು. ನಮ್ಮ ಸಮೃದ್ಧಿ ನಮ್ಮನ್ನು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರನ್ನಾಗಿ ಮಾಡುವಂತಹದ್ದಾಗಬೇಕು. ಯಾವಾಗಲೂ ನಮ್ಮ ಪ್ರಯತ್ನ ಮತ್ತು ಪ್ರಾರ್ಥನೆ, ನಾವು ಮತ್ತು ನಮ್ಮ ಸಂತಾನ ಅಲ್ಲಾಹನ ಕೋಪಕ್ಕೆ ಪಾತ್ರವಾಗಬಾರದು ಎಂದು ಇರಬೇಕು. ನಾವು ನಮ್ಮ ಹಿರಿಯರ ಅಭಿಲಾಷೆಗಳ ಮತ್ತು ಪ್ರಾರ್ಥನೆಗಳ ವಾರೀಸುದಾರರಾಗುವಂತೆ ಆಗಬೇಕು. ಅಲ್ಲಾಹನ ಅನುಗ್ರಹದಿಂದ ಜಮಾಅತ್ ವಿಶಾಲವಾಗಿ ಹರಡುತ್ತಾ ಇದೆ. ಜಮಾಅತ್ ಲೋಕದ ಮೂಲೆಮೂಲೆಗಳಲ್ಲಿ ಹಬ್ಬುತ್ತಾ

ಇದೆ. ಅಲ್ಲಾಹನು ಜನರ ಹೃದಯಗಳನ್ನು ತೆರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿ ಸೇರಲು ಉತ್ತರದಿಂದಲೂ ದಕ್ಷಿಣದಿಂದಲೂ ಪೂರ್ವದಿಂದಲೂ ಪಶ್ಚಿಮದಿಂದಲೂ ಜನರಿಗೆ ಭಾಗ್ಯ ನೀಡುತ್ತಿದ್ದಾನೆ. ತಮ್ಮ ವಿಶ್ವಾಸವನ್ನು ಹೊಳಪಿಸಲು ಈ ಜಮಾಅತ್‌ಗೆ ಸೇರುವವರು ಅಲ್ಲಾಹನೊಂದಿಗೆ ಸಾಮೀಪ್ಯ ಬಲಪಡಿಸಲು ಬಯಸುತ್ತಾರೆ. ಅವರು ಈ ಜಲ್ಸದ ಉದ್ದೇಶವನ್ನು ಈಡೇರಿಸುವವರಾಗಲಿ. ಅಲ್ಲಾಹನು ಅವರ ಹೃದಯಗಳನ್ನು ತೆರೆಯಲಿ ಮತ್ತು ತೆರೆಯುತ್ತಾ ಹೋಗಲಿ. ಜಲ್ಸದ ಉದ್ದೇಶಲಕ್ಷ್ಯವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದುದರ ಮೇಲೆ ದೃಷ್ಟಿ ಇರಿಸಿರಿ. ಅದು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದು ಮತ್ತು ನಮ್ಮ ಜೀವಿತವನ್ನು ಅಲ್ಲಾಹನ ಆಜ್ಞೆಗಳಿಗೆ ಅನುಸಾರವಾಗಿ ರೂಪಿಸುವುದು ಆಗಿದೆ. ಅದೇ ರೀತಿ ತಮ್ಮ ಸಹೋದರರ ಹಕ್ಕುಗಳನ್ನು ಈಡೇರಿಸಿ ಕೊಡಬೇಕು ಮತ್ತು ಅಲ್ಲಾಹನ ಸಂದೇಶವನ್ನು ಲೋಕದಲ್ಲಿ ಹರಡಲು ಪ್ರಯತ್ನಿಸಬೇಕು. ಈ ಎಲ್ಲ ವಿಷಯಗಳು ಅಲ್ಲಾಹನ ಆಜ್ಞೆಗಳ ಪ್ರಕಾರ ನಮ್ಮ ಸ್ಥಿತಿಯನ್ನು ಪರಿವರ್ತಿಸಲು ಮತ್ತು ಅದಕ್ಕಾಗಿ ಬಲಿದಾನ ಅರ್ಪಿಸಲು ನಮ್ಮಿಂದ ಆವಶ್ಯಪಡುತ್ತದೆ. ಈ ಜಲ್ಸ ಒಂದು ಲೌಕಿಕ ಉತ್ಸವವಲ್ಲ. ಲೌಕಿಕ ಲಾಭ ಪಡೆಯುವ ದಾರಿಯೂ ಅಲ್ಲ. ಇಲ್ಲಿಗೆ ಆಗಮಿಸಿರುವ ಎಲ್ಲರೂ ಪ್ರಥಮವಾಗಿ **ಝಿಕ್ರೆಇಲಾಹಿ** (ಅಲ್ಲಾಹನ ನಾಮಸ್ಮರಣೆ) ಬಗ್ಗೆ ಗಮನ ಹರಿಸುತ್ತಾ ಇರಬೇಕು. ಅಲ್ಲಾಹನೊಂದಿಗೆ ಸಂಬಂಧ ವರ್ಧಿಸಲು ಮತ್ತು ಅವನ ಅನುಗ್ರಹ ಗಳಿಸಲು ಇದು ಆವಶ್ಯಕವಾಗಿದೆ. ಎರಡನೆಯದಾಗಿ, ಅಲ್ಲಾಹನು ನೀಡಿದ ಆಜ್ಞೆಗಳನ್ನು ನಮ್ಮ ಜೀವನದ ಸ್ಥಿರ ಭಾಗಗಳನ್ನಾಗಿ ಪರಿವರ್ತಿಸುವುದರ ಬಗ್ಗೆ ನಾವು ಯಾವಾಗಲೂ ನೆನಪಿಟ್ಟುಕೊಳ್ಳುವುದು ಆವಶ್ಯಕವಾಗಿದೆ. ಅಲ್ಲಾಹನ **ಝಿಕ್ರ್** ಬಗ್ಗೆ ಹೇಳಲು ಬಯಸುವುದೇನೆಂದರೆ ಸಭೆಯಲ್ಲಿ ಕುಳಿತವರು ತಮ್ಮ ತಮ್ಮ ರೀತಿಗಳಲ್ಲಿ ಬೇರೆ ಬೇರೆ **ಝಿಕ್ರ್** ಮಾಡುತ್ತಾ ಇದ್ದರೂ ಅದು ಸಾಮೂಹಿಕ **ಝಿಕ್ರ್** ಆಗಿ ಪರಿಗಣಿಸಲ್ಪಡುವುದು. ಆ **ಝಿಕ್ರ್**‌ನಿಂದ ವೈಯ್ಯಕ್ತಿಕ ಲಾಭ ದೊರೆಯುವುದು ಮಾತ್ರವಲ್ಲ ಜಮಾಅತ್ ಸಹ ಅಲ್ಲಾಹನ ಅನುಗ್ರಹವನ್ನು ಗಳಿಸುವ ಮಾರ್ಗವಾಗುವುದು.

ಒಟ್ಟಿನಲ್ಲಿ, ಜಲ್ಸದಲ್ಲಿ ಭಾಗವಹಿಸುವವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಹಾಗೆ ಮತ್ತು ನಮ್ಮಿಂದ ಪ್ರತೀಕ್ಷಿಸುವ ಹಾಗೆ ಈ ದಿನಗಳನ್ನು ಕಳೆಯಬೇಕಾಗಿದೆ. ಅಲ್ಲಾಹನೊಂದಿಗೆ ಸಂಬಂಧವನ್ನು ಬಲಪಡಿಸಬೇಕಾಗಿದೆ. ನಿಮ್ಮ ಹೃದಯಗಳನ್ನು ಅಲ್ಲಾಹನ ಸೃಷ್ಟಿಗಳೊಂದಿಗಿರುವ ಪ್ರೀತಿಯಿಂದ ತುಂಬಿಸಿರಿ. ನಿಮ್ಮ ಸಹೋದರರ ಭಾವನೆಗಳನ್ನು ಲಕ್ಷಿಸಿರಿ. ಇಲ್ಲಿಗೆ ಆಗಮಿಸಿದ ಯಾರಿಗಾದರೂ ಅತೃಪ್ತಿ ಉಂಟಾದರೆ ಸಹ ಅದನ್ನು ದೂರ ಸರಿಸಲು ಪ್ರಯತ್ನಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೇಳುತ್ತಾರೆ: "ಈ ಲೋಕ ಕೆಲವು ದಿನಗಳದ್ದಾಗಿದೆ. ಇದು ಎಂತಹ ಸ್ಥಳವೆಂದರೆ ಕೊನೆಗೆ ಎಲ್ಲವೂ ನಶ್ವರ. ಒಳಗಿಂದೊಳಗೆ ಈ ನಾಶದ ಸಾಮಗ್ರಿ ಇರುತ್ತದೆ. ಅದು ತನ್ನ ಕೆಲಸ ಮಾಡುತ್ತಾ ಇರುತ್ತದೆ. ಆದರೆ ಅದು ತಿಳಿಯುವುದಿಲ್ಲ. ಆದುದರಿಂದ ಅಲ್ಲಾಹನನ್ನು ಗುರುತಿಸುವ ಕೆಲಸ ಬೇಗನೆ ಪ್ರಾರಂಭಿಸಬೇಕಾಗಿದೆ. ಅಲ್ಲಾಹನನ್ನು ಗುರುತಿಸಿದವರಿಗೆ ಅದರ ರಸಾನುಭೂತಿ ಉಂಟಾಗುತ್ತದೆ. ಯಾರು ಸತ್ಯದಿಂದಲೂ ನಿಷ್ಠಾಪೂರ್ವಕವಾಗಿಯೂ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವುದಿಲ್ಲವೋ ಅವನ ಪ್ರಾರ್ಥನೆ ಸಹ ಸ್ಪಷ್ಟವಾಗಿ ಅಂಗೀಕರಿಸಲ್ಪಡಲಾರದು. ಅವನೊಂದಿಗೆ ಅಂಧಕಾರದ ಒಂದಲ್ಲ ಒಂದು ಭಾಗ ತಗಲಿಕೊಂಡಿರುತ್ತದೆ. ನೀವು ಅಲ್ಲಾಹನ ಕಡೆಗೆ ಸ್ವಲ್ಪ ಚಲಿಸಿದರೆ ಅದಕ್ಕಿಂತ ಹೆಚ್ಚು ಅವನು ನಿಮ್ಮ ಕಡೆಗೆ ಚಲಿಸುವನು. ಆದರೆ ಮೊದಲು ನಿಮ್ಮ ಕಡೆಯಿಂದ ಚಲನೆ ಉಂಟಾಗಬೇಕಾದುದು ಆವಶ್ಯಕವಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದೆಡೆ ಈರೀತಿ ಹೇಳುತ್ತಾರೆ: "ಕೆಲವು ಜನರು ದೂರುತ್ತಾರೆ– ನಾವು ಸತ್ಕರ್ಮ ಮಾಡಿದೆವು, ನಾವು ನಮಾಝ್ ಮಾಡಿದೆವು, ಉಪವಾಸ ಅನುಷ್ಠಿಸಿದೆವು, ದಾನಧರ್ಮ ಮಾಡಿದೆವು, ಕಠಿಣ ಪರಿಶ್ರಮ ಮಾಡಿದೆವು. ಆದರೆ ನಮಗೆ ಏನೂ ಸಿಗಲಿಲ್ಲ ಎಂದು. ಇಂತಹ ಜನರು ಅಲ್ಲಾಹನ **ರುಬೂಬಿಯ್ಯತ್** (ಪಾಲನೆ ಪೋಷಣೆ) ಬಗ್ಗೆ ವಿಶ್ವಾಸ ಹೊಂದದ **'ಶಕೀಯೆ ಅಝ್‌ಲೀ'** ಆಗಿರುತ್ತಾರೆ. ಅಂದರೆ ಅವರು ಮಾಡಿದ ಸತ್ಕರ್ಮಗಳು ಅಲ್ಲಾಹನಿಗೋಸ್ಕರವಾಗಿರುವುದಿಲ್ಲ. ಯಾವುದಾದರೂ ಕೆಲಸ ಅಲ್ಲಾಹನಿಗೋಸ್ಕರ ಮಾಡಿದ್ದರೆ ಅದು ವ್ಯರ್ಥವಾಗಿ ಹೋಗಲು ಸಾಧ್ಯವಿಲ್ಲ. ಅದರ ಪ್ರತಿಫಲ ಆ ಕೆಲಸ ಮಾಡಿದವನ ಜೀವಿತ ಕಾಲದಲ್ಲಿ ಲಭಿಸದಿರಲು ಸಾಧ್ಯವಿಲ್ಲ." ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು ನಾವು ಅವನನ್ನು ನಿಷ್ಠಾಪೂರ್ಣವಾಗಿ ಆರಾಧಿಸಬೇಕು ಮತ್ತು ಅವನ ಆಜ್ಞೆಗಳನ್ನು ಪಾಲಿಸಬೇಕು. ನಾವು ಮಾಡುವ ಕೆಲಸ ಅಲ್ಲಾಹನ ಸಂಪ್ರೀತಿ ಸಂಪಾದಿಸಲಿಕ್ಕಾಗಿದ್ದರೆ ನಾವು ಅವನ ಅನುಗ್ರಹ ಪಡೆಯುವವರಾಗುವೆವು. ನಾವು ಬೈಅತ್ ಮಾಡಿದ ನಂತರವೂ ಈ ವಿಷಯಗಳ ಬಗ್ಗೆ ಗಮನಿಸುವುದಿಲ್ಲವಾದರೆ ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿದವರಾಗುವುದಿಲ್ಲ. ಪ್ರವಾದಿಗಳು ಆಗಮಿಸುವುದು ತನ್ನನ್ನು ನಂಬುವವರಲ್ಲಿ ಕ್ರಾಂತಿ ಉಂಟುಮಾಡಲಿಕ್ಕಾಗಿದೆ. ತನ್ನ ಅನುಯಾಯಿಗಳ ಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಲಿಕ್ಕಾಗಿರುತ್ತದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ **ಕಶ್ಫ್** (ದಿವ್ಯದರ್ಶನ) ಮೂಲಕ ತೋರಿಸಿದ್ದನು; ಅವರು ಹೊಸ ಭೂಮಿ ಮತ್ತು ಹೊಸ ಆಕಾಶ ನಿರ್ಮಿಸಿದರೆಂದು. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಬನ್ನಿರಿ ಮನುಷ್ಯರನ್ನು ಸೃಷ್ಟಿಸುವ ಎಂದು. ಹೊಸ ಭೂಮಿ ಹೊಸ ಆಕಾಶ ಸೃಷ್ಟಿಸುವುದು ಮತ್ತು ಮನುಷ್ಯರನ್ನು ಸೃಷ್ಟಿಸುವುದು ಅವರು ತನ್ನ ಅನುಯಾಯಿಗಳಲ್ಲಿ ಉಂಟುಮಾಡಲು ಬಯಸಿದ

ಬದಲಾವಣೆಯಾಗಿದೆ. ಹೊಸ ಭೂಮಿ ಮತ್ತು ಹೊಸ ಆಕಾಶ ಸೃಷ್ಟಿಸುವ ಎಲ್ಲದಕ್ಕಿಂತ ಉನ್ನತ ಮಟ್ಟದ ಪರಿಪೂರ್ಣ ಪ್ರಕಟಣೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ನಡೆಯಿತು. ಅವರು ಹೇಗೆ ಹೊಸ ಭೂಮಿ ಮತ್ತು ಹೊಸ ಆಕಾಶ ಸೃಷ್ಟಿಸಿದರು? ಅವರು ಶತ್ರುಗಳನ್ನು ಏಕದೇವ ವಿಶ್ವಾಸಕ್ಕೆ ಆಕರ್ಷಿಸಿದರು. ಮೂರ್ತಿಪೂಜಕರಾಗಿ ಏಕದೇವನನ್ನು ನಿರಾಕರಿಸುತ್ತಿದ್ದ ಜನರು **ಅಹದ್, ಅಹದ್** (ಏಕ,ಏಕ) ಎಂದು ಹೇಳುತ್ತಾ ಎಲ್ಲ ರೀತಿಯ ದೌರ್ಜನ್ಯಗಳನ್ನು ಸಹಿಸುತ್ತಾ ಇದ್ದರು. ಅವರು ಏಕದೇವ ವಿಶ್ವಾಸವನ್ನು ಕಾಪಾಡಲು ತಮ್ಮ ಜೀವಗಳನ್ನು ಬಲಿಯರ್ಪಿಸಿದರೇ ಹೊರತು ಏಕದೇವ ವಿಶ್ವಾಸವನ್ನು ಕೈಬಿಡಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೃಷ್ಟಿಸಿದ ಬದಲಾವಣೆ ಹಾಗೆ ಆಗಿತ್ತು. ಮಹಿಳೆಯರಿಗೆ ಅವರ ಹಕ್ಕುಗಳನ್ನು ಕೊಟ್ಟರು. ಮಹಿಳೆಯರ ಗೌರವ ಕಾಪಾಡಿದರು. ಅವರಿಗೆ ಸಮಾಜದಲ್ಲಿ ಒಂದು ಸ್ಥಾನ ನೀಡಿದರು. ಅದು ಎಂತಹ ಸಮಾಜವಾಗಿತ್ತೆಂದರೆ ಅದರಲ್ಲಿ ಮಹಿಳೆಯರಿಗೆ ಏನೂ ಗೌರವ ಇರಲಿಲ್ಲ. ಅದು ಎಂತಹ ಮಹತ್ವಪೂರ್ಣ ಪರಿವರ್ತನೆಯಾಗಿತ್ತು. ಅದು ಇಂದು ಸಹ ಹಾಗೆಯೇ ಗಣಿಸಲ್ಪಡುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃಗಗಳಿಗಿಂತ ಹೀನ ಸ್ಥಿತಿಯಲ್ಲಿದ್ದವರನ್ನು ಮನುಷ್ಯರನ್ನಾಗಿ ಮಾಡಿದರು. ಅನಂತರ ಅವರನ್ನು ವಿದ್ಯಾವಂತ ಮನುಷ್ಯರನ್ನಾಗಿ ಮಾಡಿದರು. ಅನಂತರ ದೇವ ಸಾಮೀಪ್ಯಗಳಿಸಿದ ಮನುಷ್ಯರನ್ನಾಗಿ ಮಾಡಿದರು." ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಕಟಿಸಿದ ಅದ್ಭುತ ಕೃತ್ಯವಾಗಿತ್ತು. ದೇವ ಸಾಮೀಪ್ಯಗಳಿಸಿದ ಈ ಮನುಷ್ಯರು ಪ್ರತಿಯೊಂದು ಕೆಲಸ ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಮಾಡಲು ತೊಡಗಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಸೃಷ್ಟಿಸಲ್ಪಟ್ಟ ಹೊಸ ಭೂಮಿ ಮತ್ತು ಹೊಸ ಆಕಾಶ ಇದೇ ಆಗಿತ್ತು. ಅವರ ಸತ್ಯಸಂಧನಾದ ಗುಲಾಮ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಹೇಳಿದನು: "ಹೊಸ ಭೂಮಿ ಮತ್ತು ಹೊಸ ಆಕಾಶ ಸೃಷ್ಟಿಸು" ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿದ್ದ ಮುಸ್ಲಿಮರ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿ ಹೇಗಿತ್ತೋ ಅದೇ ರೀತಿ ಈಗ ಇದೆಯೇ? ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ಮೊದಲು ಇದ್ದ **ಜಹಾಲತ್** (ಅಜ್ಞಾನ) ಈಗ ಹೊಸ ರೀತಿಯಲ್ಲಿ ಹುಟ್ಟಿದೆ. ಇದೇ ಕಾರಣದಿಂದ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು. ಹಿಂದೆ ಒಂದು ಕಾಲಘಟ್ಟದಲ್ಲಿ ಮುಸ್ಲಿಮರು **ತೌಹೀದ್** (ಏಕದೇವ ವಿಶ್ವಾಸ)ಕ್ಕೋಸ್ಕರ ಜೀವ ಅರ್ಪಿಸಿದರು. ಮತ್ತು ಪ್ರತಿಯೊಂದು ರೀತಿಯ ಬಲಿದಾನ ನೀಡಿದರು. ಇಸ್ಲಾಮನ್ನು ವಿಶಾಲವಾಗಿ ಹರಡಿದರು. ಮತ್ತು ಲೋಕದಲ್ಲಿ ಸ್ಪಷ್ಟ ಬದಲಾವಣೆ ಉಂಟಾಯಿತು. ಆದರೆ ಈಗ ಮುಸ್ಲಿಮರು ತೌಹೀದ್‌ಗೆ ಬದಲಾಗಿ ಗೋರಿಗಳಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾರೆ ಮತ್ತು ಮೃತರಾದವರಿಂದ ತಮ್ಮ ಅಭಿಲಾಷೆಗಳನ್ನು ಬೇಡಿಕೊಳ್ಳುತ್ತಾರೆ. **ಶಿರ್ಕ್**(ಬಹುದೇವಾರಾಧನೆ) ಮಾಡುತ್ತಾರೆ. **ಲಾಇಲಾಹ ಇಲ್ಲಲ್ಲಾಹ್** ಎಂದು ಈಗ ಸಹ ಹೇಳುತ್ತಾರೆ. ಆದರೆ ಅದು ಈಗ ಯಾವ ಬದಲಾವಣೆಯನ್ನೂ ಅವರಲ್ಲಿ ಉಂಟುಮಾಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಅದನ್ನು ಕಲಿತವರು ಸಹ ಅದರ ಅರ್ಥ ಮತ್ತು ಇಂಗಿತವನ್ನು ತಿಳಿದಿಲ್ಲ. ಅದನ್ನು ನಂಬುವವರು ಅದರ ಅರ್ಥ ಮತ್ತು ಉದ್ದೇಶಲಕ್ಷ್ಯದ ಅರಿವಿಲ್ಲದವರಾಗಿದ್ದಾರೆ. ಅವರು ಮುಸ್ಲಿಮರಾಗಿರುವುದು ಕೇವಲ ಹೆಸರಿನಲ್ಲಿ ಮಾತ್ರ. ಅವರಲ್ಲಿ ಕೆಲವರು ಐದು ಹೊತ್ತು ಆರಾಧನೆಯ ಬಾಹ್ಯ ಪ್ರಕಟಣೆ ಮಾಡುತ್ತಾರೆ. ನಮಾಝ್ ಮತ್ತು ಅಝಾನ್‌ನಲ್ಲಿ ಏಕದೇವ ವಿಶ್ವಾಸದ ಸಾಕ್ಷ್ಯ ಘೋಷಣೆ ಮಾಡುತ್ತಾರೆ. ಆದರೆ ಮಾಡುವ ಕೆಲಸ ಬಹುದೇವಾರಾಧನೆಯದು.

ಇಂತಹ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಬೇಕಾದುದು ಆವಶ್ಯಕವಾಗಿತ್ತು. ಒಂದು ಹೊಸ ಭೂಮಿ ಮತ್ತು ಹೊಸ ಆಕಾಶ ಸೃಷ್ಟಿಸಲಿಕ್ಕಿತ್ತು. ಅವರು ಆಗಮಿಸಿ ಒಂದು ಕ್ರಾಂತಿ ಉಂಟುಮಾಡಿ ತೋರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಗೆ ಹೊಸ ಭೂಮಿ ಮತ್ತು ಹೊಸ ಆಕಾಶ ನಿರ್ಮಿಸಿದರು ಎಂದು ನಾವು ಸಾಕ್ಷ್ಯಾಧಾರ ನೀಡಬೇಕಾದರೆ ಅದಕ್ಕೆ ನೀಡಬಹುದಾದ ಎಲ್ಲದಕ್ಕಿಂತ ದೊಡ್ಡ ಸಾಕ್ಷ್ಯ ನಾವೇ ಸ್ವಯಂ ಆಗಿದ್ದೇವೆ. **ತೌಹೀದ್** (ಏಕದೇವ ವಿಶ್ವಾಸ) ನಮ್ಮ ಪ್ರಥಮ ಆದ್ಯತೆ ಆಗಬೇಕಾಗಿದೆ. ಅಲ್ಲಾಹನೊಂದಿಗೆ ಸಂಬಂಧ ವರ್ಧಿಸಲು ನಾವು ಪ್ರಯತ್ನಿಸುತ್ತಾ ಇರಬೇಕು. ಅಲ್ಲಾಹನ ಆಜ್ಞೆಗಳ ಪ್ರಕಾರ ವರ್ತಿಸಲು ನಾವು ಧಾರಾಳ ಪ್ರಯತ್ನ ಮಾಡಬೇಕು. **ಹುಖೂಖುಲ್ ಇಬಾದ್** (ಮನುಷ್ಯರ ಹಕ್ಕುಗಳು) ಈಡೇರಿಸಲು ನಮ್ಮ ಗಮನ ಹರಿಸಬೇಕು. ನಾವು ಕೇವಲ ನಂಬಿಕೆಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅನುಸರಿಸುವವರಾಗಬಾರದು. ನಮ್ಮ ಕೆಲಸಗಳಲ್ಲಿ ಸಹ ಉತ್ತಮ ಬದಲಾವಣೆ ಕಾಣಿಸುವಂತಾಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ– ಸತ್ಯವಿಶ್ವಾಸಿಯ ಹೃದಯ ಭೂಮಿಯ ಹಾಗಿದೆ ಎಂದು. ನಿಮ್ಮ ಹೃದಯಗಳನ್ನು ವಿಶ್ವಾಸಗಳಿಗೆ ಸಂಬಂಧಿಸಿ ಮಾತ್ರವಲ್ಲ ನಿಮ್ಮ ಕೆಲಸಗಳನ್ನೂ ಲಾಭಕರವಾಗಿ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಲು ನಮಗೆ ಸಾಧ್ಯವಾದುದು ಅಲ್ಲಾಹನು ನಮಗೆ ನೀಡಿದ ಉಪಕಾರವಾಗಿದೆ. ನಮ್ಮ ಕರ್ಮಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಒಳ್ಳೆಯದನ್ನಾಗಿ ಮಾಡಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ನಮ್ಮ ಕೈಗಳಿಂದ ಭೂಮಿಯನ್ನು ದುರಸ್ತಿ ಮಾಡಲು ಅಲ್ಲಾಹನು

ಬಯಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅಲ್ಲಾಹನು ಅದರ ವಿಧಾನವನ್ನು ನಮಗೆ ಕಲಿಸಿರುವನು. ಅದನ್ನು ಅನುಷ್ಠಾನಕ್ಕೆ ತರುವುದು ನಮ್ಮ ಕೆಲಸವಾಗಿದೆ. ನಾವು ವಾಸ್ತವಿಕವಾಗಿಯೂ ಈ ಕೆಲಸ ಮಾಡುತ್ತಿದ್ದೇವೆಯೋ ಎಂದು ನೋಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸ್ಥಳದಲ್ಲಿ ಹೇಳುತ್ತಾರೆ: “ನಾನು ನೋಡುತ್ತಿದ್ದೇನೆ. ಜನರ ಸ್ಥಿತಿ ಹೇಗಿದೆ ಎಂದರೆ ಅವರು ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಪ್ರಾರ್ಥನೆ ಬಗ್ಗೆ ನಿರ್ಲಕ್ಷ್ಯತೆಯಿಂದಿರುತ್ತಾರೆ. ಸಾಧನ ಸಂಪತ್ತುಗಳ ಮೇಲೆ ಭರವಸೆ ಎಷ್ಟು ಹೆಚ್ಚಾಗಿದೆ ಎಂದರೆ ಲೌಕಿಕ ಪ್ರಯತ್ನಗಳನ್ನು ದೇವನನ್ನಾಗಿ ಮಾಡಲಾಗಿದೆ. ಪ್ರಾರ್ಥನೆ ಬಗ್ಗೆ ಅಪಹಾಸ್ಯ ಮಾಡುತ್ತಾರೆ. ಅದು ನಿರರ್ಥಕವೆಂದು ಗಣಿಸಲಾಗುತ್ತದೆ. ಇದು ಲೋಕದಲ್ಲಿ ವ್ಯಾಪಿಸುತ್ತಿರುವ ಅಪಾಯಕರವಾದ ವಿಷವಾಗಿದೆ. ಆದರೆ ಅಲ್ಲಾಹನು ಈ ವಿಷವನ್ನು ದೂರ ಸರಿಸಲು ಇಚ್ಛಿಸುತ್ತಾನೆ. ಅವನು ಈ ಜಮಾಅತನ್ನು ಸ್ಥಾಪಿಸಿರುವುದು ಲೋಕಕ್ಕೆ ಅಲ್ಲಾಹನ ಬಗ್ಗೆ ತಿಳುವಳಿಕೆ ಉಂಟಾಗಲಿಕ್ಕೆ ಮತ್ತು ಪ್ರಾರ್ಥನೆಯ ವಾಸ್ತವಿಕತೆ ಮತ್ತು ಅದರ ಪ್ರಭಾವ ಅರಿತುಕೊಳ್ಳಲಿಕ್ಕಾಗಿದೆ.”

ಈ ಉದ್ದೇಶಲಕ್ಷ್ಯವನ್ನು ಪ್ರತಿಯೊಬ್ಬ ಅಹ್ಮದಿ ತನ್ನ ಮುಂದಿರಿಸಬೇಕು. ಮತ್ತು ಅಲ್ಲಾಹನೊಂದಿಗೆ ತನ್ನ ಸಂಬಂಧ ವರ್ಧಿಸುವ ಪ್ರಯತ್ನ ಮಾಡುತ್ತಿರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: “ಇದು ಆಧ್ಯಾತ್ಮಿಕ ಯುದ್ಧದ ಕಾಲವಾಗಿದೆ. ಶೈತಾನನ ವಿರುದ್ಧ ಯುದ್ಧ ಪ್ರಾರಂಭವಾಗಿದೆ. ಶೈತಾನ್ ತನ್ನ ಎಲ್ಲ ಆಯುಧಗಳೊಂದಿಗೆ ಮತ್ತು ಕುತಂತ್ರಗಳೊಂದಿಗೆ ಇಸ್ಲಾಮಿನ ಕೋಟೆಯನ್ನು ಆಕ್ರಮಣ ಮಾಡುತ್ತಿದ್ದಾನೆ. ಅವನು ಇಸ್ಲಾಮನ್ನು ಸೋಲಿಸಲು ಇಚ್ಛಿಸುತ್ತಾನೆ. ಆದರೆ ಅಲ್ಲಾಹನು ಶೈತಾನನ ವಿರುದ್ಧ ಕೊನೆಯ ಯುದ್ಧದಲ್ಲಿ ಶಾಶ್ವತವಾಗಿ ಅವನನ್ನು ಸೋಲಿಸಲು ಈ ಜಮಾಅತನ್ನು ಸ್ಥಾಪಿಸಿದ್ದಾನೆ.”

ಆದುದರಿಂದ ಈ ಆಧ್ಯಾತ್ಮಿಕ ಯುದ್ಧಕ್ಕೋಸ್ಕರ ಪ್ರತಿಯೊಬ್ಬ ಅಹ್ಮದಿ ಪ್ರಯತ್ನಿಸಬೇಕು. ಅದಕ್ಕೋಸ್ಕರ ಮುಂದೆ ಬರುವ ಆವಶ್ಯಕತೆ ಇದೆ. ನಾವು ನಮ್ಮ ಆಧ್ಯಾತ್ಮಿಕತೆಯ ಹೊಸ ಭೂಮಿ ಮತ್ತು ಆಕಾಶ ಸೃಷ್ಟಿಸುವ ತನಕ ಇದು ಸಾಧ್ಯವಾಗದು. ಶೈತಾನನನ್ನು ಸೋಲಿಸಲು ಈ ಜಮಾಅತನ್ನು ಸ್ಥಾಪಿಸಲಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಅವರು ತನ್ನನ್ನು ನಂಬುವ ಪ್ರತಿಯೊಬ್ಬನ ಮೇಲೆ ಹೀಗೆ ಹೊಣೆಗಾರಿಕೆ ಹೊರಿಸಿದ್ದಾರೆ. ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿಗಳಿಸಿ ಶೈತಾನನನ್ನು ಎದುರಿಸಬೇಕು. ಮತ್ತು **ಹುಖೂಖುಲ್ ಇಬಾದ್** ಈಡೇರಿಸಲು ಗಮನಹರಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: “ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಅಲ್ಲಾಹನ ಎರಡು ಆಜ್ಞೆಗಳಿವೆ. ಒಂದು, ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬಾರದು. ಅವನ ಅಸ್ತಿತ್ವದ ಬಗ್ಗೆ, ಅವನ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬಾರದು. ಎರಡನೆಯದು, ಮನುಷ್ಯರ ಬಗ್ಗೆ ಸಹಾನುಭೂತಿ ಹೊಂದಿರಿ ಮತ್ತು ಉಪಕಾರ ಮಾಡಿರಿ. ನೀವು ನಿಮ್ಮ ಸಹೋದರರಿಗೆ ಮತ್ತು ಸಂಬಂಧಿಕರಿಗೆ ಮಾತ್ರ ಉಪಕಾರ ಮಾಡಿದರೆ ಸಾಕಾಗಲಾರದು. ಅಲ್ಲಾಹನ ಸೃಷ್ಟಿಗಳಾದ ಎಲ್ಲರಿಗೂ ಉಪಕಾರ ಮಾಡಿರಿ. ಹಿಂದು ಎಂದಾಗಲಿ ಕ್ರೈಸ್ತನೆಂದಾಗಲಿ ಭೇದಭಾವ ತೋರಿಸಬೇಡಿರಿ. ನಾನು ಸತ್ಯವಾಗಿ ಹೇಳುತ್ತೇನೆ. ಅಲ್ಲಾಹನು ನ್ಯಾಯಪಾಲನೆಯನ್ನು ತನ್ನ ಕೈಗೆ ಎತ್ತಿಕೊಂಡಿದ್ದಾನೆ. ನೀವು ಸ್ವತಃ ಅದನ್ನು ಮಾಡಬೇಕೆಂದು ಅವನು ಬಯಸುವುದಿಲ್ಲ. (ಎಂದರೆ ನೀವು ಸ್ವತಃ ಪ್ರತೀಕಾರ ಮಾಡಬೇಡಿರಿ) ನೀವು ಎಷ್ಟು ವಿನಯಾನ್ವಿತರಾಗುತ್ತೀರೋ ಎಷ್ಟು ದಾಕ್ಷಿಣ್ಯಪೂರ್ವಕವಾಗಿ ವರ್ತಿಸುತ್ತೀರೋ ಅಷ್ಟು ಅಲ್ಲಾಹನು ಸಂತೋಷಪಡುವನು. ನೀವು ನಿಮ್ಮ ಶತ್ರುಗಳನ್ನು ಅಲ್ಲಾಹನ ವಶಕ್ಕೆ ಬಿಡಿರಿ.”

ನಾವು ನಮ್ಮ ಎಲ್ಲ ಜವಾಬ್ದಾರಿಕೆಗಳನ್ನು ಈಡೇರಿಸಿ, ಎಲ್ಲರ ಹಕ್ಕುಗಳನ್ನು ಕೊಡುವವರಾಗುವಂತೆ ಅಲ್ಲಾಹನು ಅನುಗ್ರಹಿಸಲಿ. ನಂಬಿಕೆಗಳಲ್ಲೂ ಕರ್ಮಗಳಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾವು ಹೇಗೆ ಆಗಬೇಕೆಂದು ಬಯಸಿದರೋ ಹಾಗೆ ಆಗುವಂತಾಗಲಿ. ನಮ್ಮ ಭೂಮಿ ಸಹ ಹೊಸದಾಗಲಿ ಮತ್ತು ನಮ್ಮ ಆಕಾಶ ಸಹ ಹೊಸದಾಗಲಿ. ಹೊಸ ಆಕಾಶ ಮತ್ತು ಹೊಸ ಭೂಮಿಯನ್ನು ನಿರ್ಮಿಸುವುದರಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹಾಯ ಮಾಡುವವರಾಗಲಿ – ಆಮೀನ್.

––––––––––––––*****––––––––––––––


***Friday Sermon delivered by Hadrath Khaleefatul Masih Al Khamis*** *(atba)*

*at Frankfurt, Germany on 05-06-2015.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon